ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 9/2/2020

## ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಸುತ್ತೋಲೆ

# ಕಾಲಹರಣ ನೌಕರರಿಗೆ ಶಾಕ್!

9/2/2020

**ವಿಕ ಸುದ್ದಿಲೋಕ** ಬೆಂಗಳೂರು

ಕಚೇರಿ ಬಿಟ್ಟು ಕಾರಿಡಾರ್‌ನಲ್ಲಿ ಸುತ್ತುವ, ಕ್ಯಾಂಟೀನ್‌ನಲ್ಲೇ ಕಾಲಹರಣ ಮಾಡುವ ಸಚಿವಾಲಯ ಸಿಬ್ಬಂದಿಗೆ ಕೊನೆಗೂ ಬಿಸಿ ಮುಟ್ಟಿಸಲು ಸರಕಾರ ಮುಂದಾಗಿದೆ. ಮೇಲಾಧಿಕಾರಿ ಅನುಮತಿ ಇಲ್ಲದೆ ಕಚೇರಿ ಅವಧಿಯಲ್ಲಿ ಹೊರಗೆ ತೆರಳಿದರೆ 'ಗೈರು ಹಾಜರಿ' ಎಂದು ಪರಿಗಣಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಶುಕ್ರವಾರ ಕಟ್ಟುನಿಟ್ಟಿನ ಸುತ್ತೋಲೆ ಹೊರಡಿಸಿದೆ.

ವಿಧಾನಸೌಧ, ವಿಕಾಸಸೌಧ ಮತ್ತು ಬಹುಮಹಡಿ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುವ ಬಹುಪಾಲು ಸಿಬ್ಬಂದಿ ಕಚೇರಿಯಲ್ಲಿ ಕುಳಿತು ಕೆಲಸ ಮಾಡುವುದೇ ಕಡಿಮೆ. ಹರಟೆ, ವಾಕಿಂಗ್, ಗುಂಪು ಚರ್ಚೆ, ಮನೆಗೆ ಹಣ್ಣು, ತರಕಾರಿ ಖರೀದಿ ಮತ್ತಿತರ ವೈಯಕ್ತಿಕ ಕೆಲಸಗಳಿಗೆ ಕಚೇರಿ ಸಮಯ ಕಳೆಯುವುದು ಸಾಮಾನ್ಯವಾಗಿದೆ. ಈ ಸಂಬಂಧ ಸಿಎಂ ಹಾಗೂ ಮುಖ್ಯ ಕಾರ್ಯದರ್ಶಿಗೆ ದೂರುಗಳು ಸಲ್ಲಿಕೆಯಾಗಿವೆ. ಈ ಹಿನ್ನೆಲೆಯಲ್ಲಿ ಸಿಬ್ಬಂದಿಯಲ್ಲಿ ಸಮಯಪ್ರಜ್ಞೆ ಮತ್ತು ಕರ್ತವ್ಯ ಪ್ರಜ್ಞೆ ಮೂಡಿಸಲು ಸಿಬ್ಬಂದಿ, ಆಡಳಿತ ಸುಧಾರಣೆ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ವಿ.ಮಂಜುಳಾ ಅವರು ಶುಕ್ರವಾರ ಈ ಸುತ್ತೋಲೆ ಹೊರಡಿಸಿದ್ದಾರೆ.

**ಕಾರಿಡಾರ್‌ನಲ್ಲೇ ಕಾಲಹರಣ:** ಬಹುಪಾಲು ಸಿಬ್ಬಂದಿ ಬೆಳಗ್ಗೆ ಕಚೇರಿಗೆ ಬಂದು ಹಾಜರಿ ಹಾಕಿ, ಬ್ಯಾಗ್ ಇಟ್ಟು ಕ್ಯಾಂಟೀನ್‌ನತ್ತ ಹೊರಡುತ್ತಾರೆ. ಕಾಫಿ ಕುಡಿದು ರಿಫ್ರೆಶ್ ಆಗುತ್ತಿದ್ದಂತೆ ಕಾರಿಡಾರ್‌ನ ಗುಂಪುಗಳೊಂದಿಗೆ ಸೇರಿಕೊಳ್ಳುತ್ತಾರೆ. ಹರಟೆ, ವೈಯಕ್ತಿಕ ಹಾಗೂ ಕಚೇರಿ ವಿಚಾರಗಳ ಕಷ್ಟ -ಸುಖ ಚರ್ಚೆ ಮಾಡಿಕೊಂಡು ಮತ್ತೆ ಕಚೇರಿ ಪ್ರವೇಶಿಸಿ ಕಂಪ್ಯೂಟರ್ ಆನ್ ಮಾಡಿದರೆ ವೈಯಕ್ತಿಕ ಮೇಲ್ ಚೆಕ್ ಮಾಡಿ, ಮನೆ, ಸಂಬಂಧಿಕರು, ಸ್ನೇಹಿತರಿಗೆ ದೂರವಾಣಿ ಕರೆಯಲ್ಲಿ ಬ್ಯುಸಿಯಾಗುತ್ತಾರೆ. ಬ್ಯಾಂಕ್, ಅಂಚೆ ವ್ಯವಹಾರವೂ ಇದೇ ವೇಳೆಗೆ ನೆನಪಾಗುತ್ತದೆ. ಮೇಲಾಧಿಕಾರಿಗಳ ಒತ್ತಡದಂತೆ ಒಂದೆರಡು ಫೈಲ್ ನೋಡಿದರೆ ಹೆಚ್ಚು. ಅಷ್ಟರಲ್ಲಿ ಊಟದ ಸಮಯವಾಗುತ್ತದೆ.

ಕೆಲವರು ಕಚೇರಿಯಲ್ಲಿ, ಮತ್ತೆ ಕೆಲವರು ಕ್ಯಾಂಟೀನ್‌ನಲ್ಲಿ ಊಟಕ್ಕೆ ಕುಳಿತರೆ, ಮಹಿಳಾ ಸಿಬ್ಬಂದಿ ವಿಧಾನಸೌಧ-ವಿಕಾಸಸೌಧ ಆವರಣದ ಉದ್ಯಾನದ ತಂಪನೆ ಮರದ ಕೆಳಗೆ ಊಟದ ಬುತ್ತಿ ಬಿಚ್ಚುತ್ತಾರೆ. ಭೋಜನ ವಿರಾಮ ಮುಗಿಯಿತು ಎನ್ನುವಾಗಲೇ, ಊಟ ಮುಗಿಸಿ ಕುರ್ಚಿಯಲ್ಲಿ ಕೂತರೆ ಬೊಜ್ಜು ಬರುವುದಿಲ್ಲ ಎಂಬ ಆರೋಗ್ಯ ಪ್ರಜ್ಞೆ ಸಿಬ್ಬಂದಿಯಲ್ಲಿ ಜಾಗೃತವಾಗುತ್ತದೆ. ವಿಧಾನಸೌಧ -ವಿಕಾಸಸೌಧದ ಕಾರಿಡಾರ್‌ಗಳಲ್ಲಿ ವಾಕ್ ಮಾಡಲಾರಂಭಿಸುತ್ತಾರೆ!

ಕಾರಿಡಾರ್‌ನಲ್ಲಿ 2 -3 ಸುತ್ತು ವಾಕಿಂಗ್ ಬಹಳಷ್ಟು ಸಿಬ್ಬಂದಿಯ ನಿತ್ಯ ಹವ್ಯಾಸ. ಇನ್ನು ಕೆಲವರು ಕಬ್ಬನ್ ಪಾರ್ಕ್‌ಗೂ ತೆರಳುತ್ತಾರೆ. ಮತ್ತೆ ಕಚೇರಿಗೆ ಹೋಗಿ ಆಸನದಲ್ಲಿ ಪ್ರತಿಷ್ಠಾಪನೆಯಾಗುವ ಹೊತ್ತಿಗೆ ಅಪರಾಹ್ನದ ಕಾಫಿ ಸಮಯ. ಮತ್ತೆ ಕ್ಯಾಂಟೀನ್‌ಗೆ ದೌಡು. ಕಾಫಿ ಕುಡಿದು ಕಚೇರಿಗೆ ಬಂದವರಿಗೆ ವೈಯಕ್ತಿಕ ಕೆಲಸಗಳು ನೆನಪಾಗುತ್ತವೆ. ಕೆಲವರು ತರಕಾರಿ ಖರೀದಿಸಿಕೊಂಡು ಮನೆಗೆ ಹೋಗಬೇಕು, ಖಾಸಗಿ ಕಾರ್ಯಕ್ರಮಕ್ಕೆ ಹೋಗಬೇಕು ಎಂದು ನಿರ್ಗಮನಕ್ಕೆ ಸಿದ್ಧತೆ ಆರಂಭಿಸುತ್ತಾರೆ. 4.30ರ ವೇಳೆಗೆ ಬಂದು ನಿಲ್ಲುವ ರೂಟ್ ಬಸ್‌ಗಳತ್ತ ಹೋಗಿ ಸೀಟು ಹಿಡಿದುಕೊಳ್ಳುವ ಧಾವಂತದಲ್ಲಿರುತ್ತಾರೆ. ಅಲ್ಲಿಗೆ ಇಡೀ ದಿನ ಮುಕ್ತಾಯವಾಗುತ್ತೆ. ಇದರ ಮಧ್ಯೆ ಸಮಯ ಉಳಿದರೆ ಕೆಲಸ ಮಾಡುತ್ತಾರೆ!

### ಸುತ್ತೋಲೆಯಲ್ಲಿ ಏನಿದೆ?

- ಪ್ರತಿಯೊಂದು ಶಾಖೆಯಲ್ಲೂ ಸಿಬ್ಬಂದಿ ವರ್ಗದ ಚಲನವಲನಕ್ಕೆ ಡೈರಿ.
- ಕಚೇರಿ ವೇಳೆ ಅಧಿಕೃತ ಅಥವಾ ಅನಧಿಕೃತ ಕೆಲಸದ ಮೇಲೆ ಹೊರಗೆ ಹೋಗಬೇಕಾದರೆ ಮೇಲಾಧಿಕಾರಿ ಅನುಮತಿ ಅಗತ್ಯ.
- ಹೊರಗೆ ಹೋಗುವ ಉದ್ದೇಶ ಮತ್ತು ಮರಳಿ ಬಂದ ಸಮಯವನ್ನೂ ಪೂರ್ಣ ಸಹಿ ಮತ್ತು ದಿನಾಂಕ ಬರೆಯಬೇಕು.
- ನಮೂದಿಸದೆ ಹೊರಗೆ ಹೋಗಿದ್ದರೆ 'ಅನಧಿಕೃತ ಗೈರು ಹಾಜರಿ' ಎಂದು ಪರಿಗಣಿಸಿ ಶಿಸ್ತು ಕ್ರಮ ತೆಗೆದುಕೊಳ್ಳಬೇಕು.
- ಕಚೇರಿ ಮುಖ್ಯಸ್ಥರು, ಮೇಲಾಧಿಕಾರಿಗಳು ಪ್ರತಿ ಶಾಖೆಗೆ ಆಗಾಗ ಭೇಟಿ ನೀಡಬೇಕು. ಡೈರಿಯನ್ನು ಪರಿಶೀಲಿಸಬೇಕು.



### ರಾಜಕೀಯ ಪ್ರಭಾವ

ವಿಧಾನಸಭೆ, ವಿಧಾನ ಪರಿಷತ್ ಸಚಿವಾಲಯಗಳಲ್ಲಿ ಅಗತ್ಯಕ್ಕಿಂತ ಎರಡ್ಮೂರು ಪಟ್ಟು ಹೆಚ್ಚು ಸಿಬ್ಬಂದಿ ಇದ್ದಾರೆ. ಬಹಳಷ್ಟು ಸಿಬ್ಬಂದಿಗೆ ಕೆಲಸದ ಒತ್ತಡವೇ ಇಲ್ಲ. ಒಬ್ಬೊಬ್ಬರಿಗೂ ಒಂದೊಂದು ರೀತಿಯಲ್ಲಿ ರಾಜಕೀಯ ಪ್ರಭಾವದ ನಂಟಿದೆ. ಇಂಥವರು ಕೆಲಸದ ಅವಧಿಯಲ್ಲಿ ಕಚೇರಿಯಲ್ಲಿ ಕೂರುವುದಕ್ಕಿಂತ ಹೊರಗೆ ಸುತ್ತುವುದೇ ಹೆಚ್ಚು.